Literacy for a Billion

Movie: Jodi Hakki
Year: 1997

Song: Neelaambari
Lyricist: V Manohar

ನೀಲಾ ನೀಲಾ ನೀಲಾಂಬರಿ
ನನ ಬಾಳ ಭಾಗ್ಯ ಸಿರಿ
ನನಗೆ ಚೇತನ ನಿನ ಧ್ಯಾನ
ನೀಲಾ ನೀಲಾ ನೀಲಾಂಬರಿ
ನನ ಬಾಳ ಭಾಗ್ಯ ಸಿರಿ

ನೂರು ಪದಮಣಿಯು
ಸೇರಿ ಲಾವಣಿಯು
ನನ ಲಾವಣಿ ನೀನೆ ಮಣಿ
ನನ ಕಣ್ಮಣಿ ನೀನೆ ಗಿಣಿ
ಬದುಕಲಿ ನಗುವನು ಬರೆದವ
ಪರಶಿವ ಶುಭವನು ಹರಸಿದನು
ಹೃದಯವನಾರಿಸಿ
ಉಸಿರೆದೆ ಸೇರಿಸಿ
ಅರಳಿಸಿ ನೋಡುವನು

ನೀಲಾ ನೀಲಾ ನೀಲಾಂಬರಿ
ನನ ಬಾಳ ಭಾಗ್ಯ ಸಿರಿ
ನನಗೆ ಚೇತನ ನಿನ ಧ್ಯಾನ

ನೀಲಾ ನೀಲಾ ನೀಲಾಂಬರಿ
ನನ ಬಾಳ ಭಾಗ್ಯ ಸಿರಿ

ಏಳು ಜನುಮಗಳು ಕೇಳಿ ಪಡೆದವರು
ಒಂದೇ ಜನುಮ ಇದೆ ಎಂದಾದರೆ
ಹೀಗೇ ಸೇರಿಸಯ್ಯಾ ಓ ದೇವರೆ
ತಪಸಿನ ಫಲವಿದು
ಒಲವಿನ ಫಲವಿದು
ಬದುಕಿಗೆ ಹೊಂಗಿರಣ
ಕುಣಿಯುವ ಮನ್ಮಥ
ಹರುಷವ ತಂದನು
ನಗುವಿನ ಸಂಕ್ರಮಣ

ನೀಲಾ ನೀಲಾ ನೀಲಾಂಬರಿ
ನನ ಬಾಳ ಭಾಗ್ಯ ಸಿರಿ
ನನಗೆ ಚೇತನ ನಿನ ಧ್ಯಾನ
ನೀಲಾ ನೀಲಾ ನೀಲಾಂಬರಿ
ನನ ಬಾಳ ಭಾಗ್ಯ ಸಿರಿ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.